ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ, ಮಂಗಳಬಾಗಿಲಿನಲ್ಲಿ ಒಂದು ಹೆದ್ದಾರಿ ಸೌಲಭ್ಯವನ್ನು ಕೇಂದ್ರ ಸರ್ಕಾರವು ನಿರ್ಮಿಸಲು ಯೋಜನೆಯನ್ನು ಹಾಕಿಕೊಂಡಿರುತ್ತದೆಂದು ಹೇಳಿದ್ದೀರಿ ನಾನು ಮಂಗಳಬಾಗಿಲಿನಲ್ಲಿ ಹೋಟೆಲ್ ಒಂದನ್ನು ಸ್ಥಾಪಿಸಬೇಕೆಂದು ಕೇಳಿದ್ದೇನೆ. ತಾವು ಅದಕ್ಕೂ ಇದಕ್ಕೂ ಮಿಕ್ಸ್ ಮಾಡಬೇಡಿ. ನಮಗೆ ಈಗ ಸದ್ಯಕ್ಕೆ ಹೋಟೆಲ್ ಒಂದನ್ನು ಕೊಡಿ.

ಶ್ರೀ ಜೀವರಾಜ ಆಳ್ವ.— ಈ ಪಾಸ್ ಕೌಂಟರನ್ನು ನಿರ್ಮಿಸುವುದನ್ನು, ಈ ಕೆಲಸವನ್ನು ನಮ್ಮ ಇಲಾಖೆಯಿಂದಲೇ ಮಾಡಿಸುತ್ತೇನೆ. ಈ ಹೋಟೆಲ್ ಒಂದನ್ನು ನಿರ್ಮಿಸುವ ಕೆಲಸ ಕೇಂದ್ರ ಸರ್ಕಾರದ ಒಂದು ಸ್ಕೀಂನಲ್ಲಿ ಬರುವುದರಿಂದ ಅದು ಆಗಲೇ ಆಗುತ್ತದೆ.

ಕುಂದಾಪುರ ಕ್ಷೇತ್ರದ ಅವರ್ಸೆಯಲ್ಲಿ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಸಿಬ್ಬಂದಿಯ ಕೊರತೆಯ ಬಗ್ಗೆ.

೭೬೯. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಾಪುರ ಕ್ಷೇತ್ರದ ಅವರ್ಸೆ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಮಂಜೂರಾದ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯೆ ಬಲವೆಷ್ಟು ?

ಆ) ಅವರ್ಸೆ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಕೊರತೆ ಇರುವ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯೆ, ಬಲವೆಷ್ಟು ?

ಇ) ಈ ಕೊರತೆಯನ್ನು ಎಂದು ನೀಗಲಾಗುವುದು ?

ಶ್ರೀ ಬಿ. ಡಿ. ಇನಾಂದಾರ್ (ಆರೋಗ್ಯ ಮಂತ್ರಿಗಳು).—

ಅ) ವೈದ್ಯಾಧಿಕಾರಿ	—	೧
ಫಾರ್ಮಾಸಿಸ್ಟ್	—	೧
ಕಿರಿಯ ಆರೋಗ್ಯ ಸಹಾಯಕಿ	—	೨
'ಡಿ' ವರ್ಗದ ನೌಕರರು	—	೨
		೬

ಆ) ಕಿರಿಯ ಆರೋಗ್ಯ ಸಹಾಯಕಿ — ೧

ಇ) ಆದಷ್ಟು ಜಾಗ್ರತೆ ತುಂಬಲಾಗುವುದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಈ ಒಂದು ಹೇಳಿಕೆ ಸತ್ಯಕ್ಕೆ ದೂರವಾದುದು ಎಂದು ಹೇಳುತ್ತೇನೆ. ಈ ಒಂದು ಹೇಳಿಕೆ ಸಂಪೂರ್ಣವಾಗಿ ತಪ್ಪು ಎಂದು ಹೇಳಬಹುದು. ಏತಕ್ಕೆಂದರೆ ಈ ಒಂದು ಆಸ್ಪತ್ರೆಯನ್ನು ಪ್ರಾರಂಭ ಮಾಡಿದ ಲಾಗಾಯ್ತು ಇದುವರೆಗೂ ಯಾವ ಒಂದು ವೈದ್ಯಾಧಿಕಾರಿಯನ್ನೂ ನೇಮಕ ಮಾಡಿಲ್ಲ. ಒಂದು ವೇಳೆ ನೇಮಕ ಮಾಡಿದ್ದರೆ ಅದರ ತಾರೀಕನ್ನು ತಿಳಿಸುತ್ತೀರಾ ?

ಶ್ರೀ ಡಿ. ಬಿ. ಇನಾಂದಾರ್.— ಮಾನ್ಯ ಅಧ್ಯಕ್ಷರೇ, ಈಪೊತ್ತು ಅಲ್ಲಿ ಮೆಡಿಕಲ್ ಆಫೀಸರ್ಸ್ ಇಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರ ಗಮನಕ್ಕೆ ತರಬೇಕಾದರೆ ದಿನಾಂಕ ೨೧-೧೧-೮೯ರಂದು ಅಲ್ಲಿಗೆ ಡಾಕ್ಟರ್ ರಾಘವೇಂದ್ರ ಹೆಬ್ಬಾರ್ ಅನ್ನುವವರನ್ನು ಪೋಸ್ಟ್ ಮಾಡಲಾಗಿದೆ,

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ —ಸ್ವಾಮಿ, ಮಾನ್ಯ ಮಂತ್ರಿಗಳು ಅಲ್ಲಿಗೆ ಡಾಕ್ಟರನ್ನು ಪೋಸ್ಟ್ ಮಾಡಿದ್ದೇವೆಂದು ಹೇಳಿದ್ದಾರೆ. ನಾನು ಕೇಳುತ್ತೇನೆ. ಇವರು ಪೋಸ್ಟ್ ಮಾಡಿದ ತಕ್ಷಣ ಅವರು ಅಲ್ಲಿ ಇದ್ದಾರೋ ಇಲ್ಲವೋ ಎನ್ನುವುದನ್ನು ಏನಾದರೂ ಪರಿಶೀಲನೆ ಮಾಡಿದ್ದಾರೆಯೇ? ಅಲ್ಲಿಗೆ ಇನ್ನೂ ಯಾವ ವೈದ್ಯರೂ ಬಂದಿಲ್ಲ. ಆದುದರಿಂದ ಈಗಲಾದರೂ ತಾವು ಪರಿಶೀಲನೆ ಮಾಡುತ್ತೀರಾ ?

ಶ್ರೀ ಡಿ. ಬಿ. ಇನಾಂದಾರ್.—ಮಾನ್ಯ ಅಧ್ಯಕ್ಷರೇ, ಆ ಡಾಕ್ಟರನ್ನು ಅಂದರೆ ಶ್ರೀ ರಾಘವೇಂದ್ರ ಹೆಬ್ಬಾರ್ ಅವರನ್ನು ಟೆಂಪರ್ವರಿಯಾಗಿ ಪೋಸ್ಟ್ ಮಾಡಿತ್ತು. ಅನಂತರ ಅವರನ್ನು ಪಿ. ಹೆಚ್. ಯು. ಪಣಜಿಗೆ ಡೆಪ್ಯೂಟ್ ಮಾಡಿದರು. ಅನಂತರ ಅವರ ಬದಲಿಗೆ ಡಾಕ್ಟರ್. ಸಿದ್ದಲಿಂಗಯ್ಯ ಅವರನ್ನು ಪೋಸ್ಟ್ ಮಾಡಿತ್ತು. ಮತ್ತೆ ಹಿಂದೆ ಇದ್ದ ಡಾ. ರಾಘವೆಂದ್ರ ಹೆಬ್ಬಾರ್ ಅವರನ್ನೇ ದಿನಾಂಕ ೩೦-೧-೮೬ ರಲ್ಲಿ ಪೋಸ್ಟ್ ಮಾಡಲಾಗಿದೆ.

ಬಿಜಾಪುರ ಜಿಲ್ಲೆಯಲ್ಲಿನ ಪೋಲೀಸ್ ಕಲ್ಯಾಣ ನಿಧಿಯ ಬಗ್ಗೆ

೧೮೧೦. ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ

ಅ) ಪೋಲೀಸ್ ಕಲ್ಯಾಣ ನಿಧಿಗೆ ಬಿಜಾಪುರ ಜಿಲ್ಲೆಯಲ್ಲಿ ಸಂದಾಯವಾದ ಹಣವೆಷ್ಟು ? (ತಾಲ್ಲೂಕಾವಾರ ವಿವರ ಕೊಡುವುದು)

ಆ) ಪೋಲೀಸ್ ಕಲ್ಯಾಣ ನಿಧಿ ವಸೂಲಿಯಲ್ಲಿ ಅಥವಾ ಸಂಗ್ರಹಿಸುವಾಗ ಅಕ್ರಮಗಳಾದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಆ ಬಗ್ಗೆ ಏನಂ ಕ್ರಮಂ ಕೈಗೊಳ್ಳಲಾಗಿದೆ ?

ಶ್ರೀ ಬಿ, ರಾಚಯ್ಯ (ಗೃಹ ಮಂತ್ರಿಗಳು)

ಅ) ಬಿಜಾಪುರ ಜಿಲ್ಲೆಯಲ್ಲಿ ಪೋಲೀಸ್ ಕಲ್ಯಾಣ ನಿಧಿಗೆ ಒಟ್ಟು ೧೫,೧೨,೦೭೦-೦೦ ರೂ.ಗಳನ್ನು ಸಂಗ್ರಹಿಸಲಾಗಿದೆ.

ತಾಲೂಕಾವಾರ ವಿವರಗಳು ಈ ರೀತಿ ಇವೆ

೧.	ಬಿಜಾಪುರ	೩,೦೧,೨೫೮-೦೦
೨.	ಇಂಡಿ	೭೫,೮೫೨-೦೦
೩.	ಶಿಂದಗಿ	೮೭,೧೫೦-೦೦
೪.	ಮುದ್ದೆಬಿಹಾಳ್	೮೧,೨೫೦-೦೦
೫.	ಮುಧೋಳ	೨,೮೯,೨೪೦-೦೦
೬.	ಬಾಗಲಕೋಟೆ	೧,೩೯,೮೧೦-೦೦
೭.	ಬಾಗೇವಾಡಿ	೬೩,೪೭೦-೦೦
೮.	ಜಮಖಂಡಿ	೨,೬೪,೯೪೭-೦೦
೯.	ಹುನಗುಂದ	೯೪,೦೧೦-೦೦
೧೦.	ಬೀಳಗಿ	೨೮,೬೭೭-೦೦
೧೧.	ಬಾದಾಮಿ	೯೧,೪೦೫-೦೦
	ಒಟ್ಟು	೧೫,೧೨,೦೭೦-೦೦

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಂ. ಎಲ್. ಉಸ್ತಾದ್.—ಸನ್ಮಾನ್ಯ ಅಧ್ಯಕ್ಷರೇ, ತವಂಗೆ ಗೊತ್ತಿರುವ ಹಾಗೆ ಈ ಸಲವೂ ನಮ್ಮ ಜಿಲ್ಲೆಯಲ್ಲಿ ಭಾ ಬರಗಾಲ ಇರುವಂಥಾ ಈ ಒಂದು ಸಮಯದಲ್ಲಿ ಪೋಲೀಸಿನವರು ಏನು ಮಾಡಿದ್ದಾರೆಂದರೆ ಯಾರು ಈ ಪೋಲೀಸ್ ಕಲ್ಯಾಣ ನಿಧಿಗೆ ಹಣ ಕೊಡುವುದಿಲ್ಲವೋ ಅಂಥಾವರ ಬಗ್ಗೆ ಅಕ್ರಮಗಳನ್ನು ನಡೆಸುತ್ತಿದ್ದಾರೆ. ಇವರು ಎಂತೆಂತಹ ಅಕ್ರಮಗಳನ್ನು ನಡೆಸುತ್ತಿದ್ದಾರೆಂದರೆ, ಈ ಪೊತ್ತಿನ ದಿವಸ ಸಮಾಜ ಘಾತುಕ ಶಕ್ತಿಗಳು ಯಾರು ಇದ್ದಾರೋ ಅಂಥಾವರ ಕಡೆಗೆ ಹೋಗಿ ಇದಕ್ಕೆ